ಅಳಬೇಕಿತ್ತು. ಏಳು ಏಳು... ಎಂದು ಬೊಬ್ಬಿರಿದು ಗೋಳಾಡಬೇಕಿತ್ತು, ನಂದೇನೂ ತಪ್ಪಿಲ್ಲವ್ವಾ... ಏನ್ಮಾಡ್ಬೇಕಂತಲೇ ಗೊತ್ತಾಗ್ಲಿಲ್ಲವ್ವಾ ಎಂದೆಲ್ಲ ಹೇಳಬೇಕಿತ್ತು. ಅವ್ವ ನೇರನಿಂತು ಅತ್ತು, ನಂಗೆ ಬಯ್ದು, ಅಪ್ಪಿ... ಮಗ್ನೇ... ಯಾಕೋ ಇಂಗ್ಮಾಡ್ದೇ... ಅನ್ನಬೇಕಿತ್ತು. ಕಿರುಚಬೇಕಿತ್ತು. ಹೊಡೆಯಬೇಕಿತ್ತು ಕಪಾಳಕ್ಕೆ... ಹಿಂದೆಯೇ ಎದೆಗವಚಿಕೊಳ್ಳಬೇಕಿತ್ತು.

ಆದರೆ, ಹಾಗೇನೂ ಆಗಲಿಲ್ಲ. ಅಸಲು ಅವ್ವನನ್ನು ಹೇಗೆ ಹಾಗೆಲ್ಲ ಅಪ್ಪಿಕೊಳ್ಳುವುದಂತಲೇ ನನಗೆ ಗೊತ್ತಿಲ್ಲ. ಅವಳ ಮಡಿಲಲ್ಲಿ ತಲೆಯಿಟ್ಟು ಮಲಗುವುದು ಹೇಗೆ ಗೊತ್ತಿಲ್ಲ. ಅವಳನ್ನು ಮಗುವಿನಂತೆ ಮಲಗಿಸಿಕೊಳ್ಳುವುದು ಹೇಗೆ, ಅದೂ ಗೊತ್ತಿಲ್ಲ. ಗೊತ್ತಾಗುತ್ತಿಲ್ಲ. ಹಾಗೆಲ್ಲ ಹೇಗೆ ಮಾಡುವುದೆಂದು ಅಂದಾಜೇ ಇಲ್ಲ. ನಿಜದಲ್ಲಿ ಒಂದು ವೇಳೆ ಅಪ್ಪಿಕೊಂಡರೂ ಅದೆಲ್ಲ ನಿಜವೆನಿಸುವುದಿಲ್ಲ. ಆದರೆ, ಎದೆಯೊಳಗೆ ಅಷ್ಟೆಲ್ಲವೂ ನಡೆಯುತ್ತಿದೆ... ನಾನು ಅವ್ವನ ಕಾಲಿನಡಿ ಕುಸಿದಿದ್ದೇನೆ. ಅವ್ವನನ್ನು ಅಪ್ಪಿಕೊಂಡಿದ್ದೇನೆ. ಅಳುತ್ತಿದ್ದೇನೆ. ಕನಲುತ್ತಿದ್ದೇನೆ. ನಿಜದಲ್ಲಿ ಇದ್ಯಾವುದೂ ನಡೆಯುತ್ತಿಲ್ಲವಾದರೂ ನನ್ನೊಳಗೆ ಇದೆಲ್ಲವೂ ನಡೆಯುತ್ತಿದೆ. ಇದೇ ನಿಜ.

ಕೇಳಲಾರದೇ ಹೋಗುವ ಕ್ಷಮೆಯೊಂದನ್ನು ಎದೆಯೊಳಗೆ ಹೊತ್ತುಕೊಂಡು ತಿರುಗಬೇಕಾದ ಶಿಕ್ಷೆಗೆ ಸಮನಾದ ಶಿಕ್ಷೆ ಬೇರೊಂದಿಲ್ಲ. ಅದು ನಮ್ಮನ್ನ ಕೊನೆತನಕ ಕೊಲ್ಲುತ್ತಿರುತ್ತದೆ.

'ನೀ ಯೇನು ಯೇಚ್ನೆ ಮಾಡ್ಬೇಡ, ಚಂದಾಗವ್ನೆ, ಮೆಡ್ರಾಸಲ್ಲಿ ಒಳ್ಳೆ ಕೆಲುಸ್ವಂತೆ, ಮದ್ವಾಗಿ ಮಕ್ಳವ. ಕರ್ಕಬತ್ತಾನೆ ಮುಂದ್ಲು ವಾರ. ಅಲ್ಯಾಕಿದೀಯೆ ಗೊತ್ತಿಲ್ದೂರಲ್ಲಿ. ಇನ್ನೆಸ್ಟು ದಿನಾಂತ ಇದೀಯೆ, ಬಾ ಎಡ್ತಿ ಮಕ್ಳು ಕರ್ಕಂದು ಅಂದಿವ್ನಿ, ಸರಿ ಅಂದ್ನ' ಎಂದು ಅತ್ತೆ ಅವ್ವನ ಕಿವಿಯ ಬಳಿ ಮೆಲ್ಲಗೆ ಹೇಳಿದ್ದಳು.

ವಾಸ್ತವದಲ್ಲಿ ಅತ್ತೆಯೊಂದಿಗೆ ನಾ ಮದ್ರಾಸಿನಲ್ಲಿದ್ದೇನೆ ಅನ್ನುವುದು ಬಿಟ್ಟರೆ ಹೀಗೇನೂ ನಾನು ಹೇಳಿರಲಿಲ್ಲ. ಆದರೂ ಅವಳು ಸಮಯಾನುಸಾರ ಮಾತಾಡಿದ್ದಳು. ಹಾಗೆ ಹೇಳಿ ಆ ಇಡೀ ಸನ್ನಿವೇಶವನ್ನು ಹಗುರಾಗಿಸಿದ್ದಳು. ಅವತ್ತೂ ಆ ದುರ್ಭರ ಗಳಿಗೆಯಲ್ಲೂ ಇವಳು ಇದ್ದಿರಬೇಕಿತ್ತು, ಅತ್ತೆ ಇದ್ದಿದ್ದರೆ ಇಷ್ಟೆಲ್ಲ ಆಗಿರುತ್ತಿರಲಿಲ್ಲ... ನಾನು ನಿಟ್ಟುಸಿರಾಗಿದ್ದೆ.

'ಸುಮ್ನೆ ಏನಾರ ಯೇಚಿಸ್ಬೇಡ ಪುಟ್ಟು, ಒಂದೊಂದ್ಸಲ ಇಂಗೇಯ, ನಾವೊಂದನ್ಕಂಡ್ರೆ ತಾನೊಂದಾಯ್ತದೆ. ಬುಡು, ನೀ ಎಂಗೋ ಮೊನ್ಸು ಮಾಡಿ ಬಂದಲ್ಲ, ಅದ್ಸಾಕು... ಎಲ್ಲ ಸರಿಯಾಯ್ತದೆ'. ಅತ್ತೆ ಸಡಗರಿಸಿಕೊಂಡಳು. ಲೆಕ್ಕದಲ್ಲಿ, ಅವಳೇ ಹೆಚ್ಚು ಕೋಪಿಸಿಕೊಳ್ಳಬೇಕಿತ್ತು, ಮತ್ತೇನಕ್ಕಿಲ್ಲವೆಂದರೂ, ಸರಸ್ವತಿಯನ್ನು ಹಾಗೆ ಬಿಟ್ಟು ಹೋಗಿದ್ದಕ್ಕಾದರೂ...

ಸರಸ್ವತಿಯ ನೆನಪು ನನ್ನನ್ನು ತೋಯಿಸಿತು. ಅವಳು ಹೇಗಿದ್ದಾಳೆಂದು ಒಂದು ಮಾತು ಕೇಳೋಣವೆಂದರೂ ಅದೇನೋ ನಾಲಗೆಯೇ ಹೊರಳದೆ ಹೋಯಿತು. ಎಲ್ಲೋ ಮದುವೆಯಾಗಿ ಸುಖವಾಗಿರಬೇಕು, ಇಲ್ಲವಾದರೆ ಅತ್ತೆಯ ಮುಖದಲ್ಲದು ಕೊಂಚವಾದರೂ ಕಂಡಿರುತ್ತಿತ್ತಲ್ಲವೇ? ಆದರೆ ದಿನೇಶ ನನ್ನನ್ನು ನೋಡಿಯೂ ಒಂದು ಪ್ರೀತಿಯ ಮಾತು ಸಹಾ ಆಡಲಿಲ್ಲವಲ್ಲ! ಅವನಿಗೆ ನಾನು ಮರಳಿ ಬಂದದ್ದರಿಂದ ಇರಿಸುಮುರಿಸಾಗಿದೆ, ಎಲ್ಲಿ ಆಸ್ತಿಗೆ ನಿಂತಾನು ಎಂದು ಯೋಚಿಸಿದನೆ? ಅಥವಾ ಕೋಪವಿನ್ನೂ ಹೋಗಿಲ್ಲವೇ? ಹೇಗೆ ಹೋದೀತು? ಊರಿನ ಮಾತಿಗೆ ಅವನು ಹೇಗೆ ಕಿವಿಗೊಡದೆ ಉಳಿದಾನು. ಇವತ್ತಿಗೂ ನಾನು ನಿದ್ದೆಯಲ್ಲೂ ಒಮ್ಮೊಮ್ಮೆ ಬೆಚ್ಚುತ್ತೇನೆ. ಮೀನಾಕ್ಷಿ ಹಗುರಾಗಿ ಬೆನ್ನು ನೇವರಿಸಿ, 'ಏನ್ನಾಚಿಂಗ? ಕೆಟ್ಟ ಕನವೇದಾಚ್ಚು ಪಾತಿಂಗಳಾ ಎನ್ನ?' ಎಂದು ಕೂದಲಲಿ ಕೈಯಾಡಿಸಿ ಎದೆಗೆಳೆದು ಅಪ್ಪಿಕೊಳ್ಳುತ್ತಾಳೆ. ಹಾಗೆ ಅಪ್ಪಿಕೊಳ್ಳುವಾಗ, ನಾನು ಅದೇ ಆಗ ಹುಟ್ಟಿದ ಮಗುವೇನೋ ಎಂಬಂತೆ ಅವಳ ಮೊಲೆಗಳಿಗೆ ಮೂಗುಜ್ಜಿ ಮುಖ ಹುದುಗಿಸಿ ಮುದಗೊಳ್ಳುತ್ತೇನೆ. ಪ್ರೇಮದರಸಿ ಸರಸ್ವತಿಯನು ನನ್ನಿಂದ ಕಸಿದುಕೊಂಡು ತಾಯಿಯಂಥ ಮೀನಾಕ್ಷಿಯನು ಕೊಟ್ಟ ಬದುಕಿಗೆ ಕೃತಜ್ಞತೆ ಹೇಳಬೇಕೇ... ಅಥವಾ... ಬದುಕು ನನ್ನನ್ನು ನಡೆಸಿಕೊಂಡ ಬಗೆಗೆ ಮರುಗಬೇಕೆ? ನನಗೆ ತಿಳಿಯದು ಇವತ್ತಿಗೂ...

ಹಾಗೆ ನೋಡಿದರೆ... ಬಹುಶಃ ಇದು ನನ್ನೊಬ್ಬನದ್ದಲ್ಲ, ಎಲ್ಲರ ಪಾಡೂ...

ಬದುಕು ಕೊಡಮಾಡುವ ಅಚ್ಚರಿಯ ಹಾದಿಯಲಿ ಮರುಳಾಗಿ ನಡೆಯುವುದರ ಹೊರತು ನಮಗೆ ನಿಜಕ್ಕೂ ಆಯ್ಕೆಗಳಿವೆಯೆ? ಹಾಗೊಂದು ವೇಳೆ ಆಯ್ದುಕೊಂಡಿದ್ದೇ ದಕ್ಕಿತೆಂದುಕೊಂಡಾಗ ಅದುವೇ